# ಜೈಲ್ ಇಂಡಸ್ಟ್ರಿ!




**ಜೈಲಿನಲ್ಲಿರುವ ಕೈದಿಗಳನ್ನು ದುಡಿಸಿಕೊಂಡು ಸರ್ಕಾರ ಕೋಟಿಗಟ್ಟಳೆ ಲಾಭ ಮಾಡಿಕೊಳ್ಳುತ್ತಿದೆ. ಆದರೆ ಆ ಕೈದಿಗಳಿಗೆ ಕೊಡುವ ಕೂಲಿ ಮಾತ್ರ ಅತ್ಯಲ್ಪ!**

■ ಶ್ರೀನಿವಾಸ ಜೋಕಟ್ಟೆ

ಜೈಲುಗಳಲ್ಲಿ ಕೈದಿಗಳನ್ನು ಸುಮ್ಮನೆ ಕುಳ್ಳಿರಿಸಿ ಊಟ ಹಾಕುವುದಿಲ್ಲ– ದುಡಿಮೆಗೆ ಹಚ್ಚುತ್ತಾರೆ. ಜೈಲುಗಳಲ್ಲಿ ಹಲವಾರು ವಸ್ತುಗಳನ್ನು ಈ ಕೈದಿಗಳು ಉತ್ಪಾದಿಸುತ್ತಾರೆ. ಕೈದಿಗಳಿಗೆ ಕನಿಷ್ಠ ಕೂಲಿಯನ್ನು ನೀಡಿ ನಮ್ಮ ಸರಕಾರ ಆ ಮೂಲಕ ಪ್ರತಿವರ್ಷ ಕೋಟ್ಯಾಂತರ ರೂಪಾಯಿ ಸಂಪಾದಿಸುತ್ತಿದೆ! ಹಾಗೆ ಕೈದಿಗಳು ತಯಾರಿಸಿದ ವಸ್ತುಗಳಲ್ಲಿ– ಪೊಲೀಸ್ ಠಾಣೆಗಳಲ್ಲಿ ಇನ್ಸ್‌ಪೆಕ್ಟರ್ ಕೂರುವ ಕುರ್ಚಿ, ಮೇಜುಗಳಿಂದ ಹಿಡಿದು, ದೊಡ್ಡ ಮಳಿಗೆಗಳಲ್ಲಿ ಮಾರಲ್ಪಡುವ ಬಟ್ಟೆಗಳ ತನಕ ಎಲ್ಲವೂ ಇರುತ್ತದೆ.

ಇತ್ತೀಚೆಗೆ ಅಂಡಮಾನ್ ದ್ವೀಪವನ್ನು ಸುತ್ತಾಡಿ ಬಂದಾಗ ಸೆಲ್ಯುಲರ್ ಜೈಲ್ ನೋಡುವ ಅವಕಾಶ ಸಿಕ್ಕಿತ್ತು. ಅದು ನಮ್ಮ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧಿಸಿಟ್ಟಿದ್ದ ಜೈಲು. ಸ್ವಾತಂತ್ರ್ಯವೀರ ಸಾವರ್ಕರ್‌ರನ್ನು ಇದೇ ಜೈಲಿನಲ್ಲಿ ಇರಿಸಿದ್ದರಿಂದ ಇತರ ಜೈಲುಗಳಿಗಿಂತ ಈ ಜೈಲು ವಿಶೇಷ ಪ್ರಸಿದ್ಧಿ ಪಡೆದಿದೆ. ಇಲ್ಲಿ ಈಗ ಪ್ರವಾಸಿಗರಿಗೆ ಒಳಗೆಲ್ಲ ಸುತ್ತಾಡುವ ಅವಕಾಶವಿದೆ. ನೂರಾರು ಕೈದಿಗಳು ಅಲ್ಲಿ ದುಡಿಯುತ್ತಿದ್ದರು. ಅಂಡಮಾನ್ ದ್ವೀಪಗಳು ತೆಂಗಿನ ಮರಗಳಿಗೆ ಬಹು ಖ್ಯಾತಿ. ಹಾಗಾಗಿ ತೆಂಗಿನೆಣ್ಣೆ ತೆಗೆಯುವ ಗಾಣದ ದೃಶ್ಯ, ಕೈದಿಗಳು ಅದಕ್ಕಾಗಿ ಪಡುತ್ತಿದ್ದ ಶ್ರಮ– ಎಲ್ಲವೂ ಕುತೂಹಲ ಕೆರಳಿಸಿದವು.

ಇಪ್ಪತ್ತೈದು ವರ್ಷಗಳ ಹಿಂದೆ (1988ರಲ್ಲಿ) ಸಾಹಿತ್ಯ ಅಕಾಡೆಮಿ ಬಳ್ಳಾರಿ–ಯಲ್ಲಿ ಒಂದು ವಾರ ಕಾಲದ ಕಥಾ ಕಮ್ಮಟ ಏರ್ಪಡಿಸಿದ್ದಾಗ ನಾನೂ ಒಬ್ಬ

(38ನೇ ಪುಟ ನೋಡಿ)